# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103.

**ದಿನಾಂಕ: 23.01.2024 ರಂದು ಮಧ್ಯಾಹ್ನ: 3:15 ಗಂಟೆಗೆ ONLINE ಮುಖಾಂತರ ನಡೆದ 2023-24ನೇ ಸಾಲಿನ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಎಂ. ವೆಂಕಟೇಶ್ವರಲು, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಶಿವಲಿಂಗಸ್ವಾಮಿ ಹೆಚ್.ಕೆ.<br>ಹಿರಿಯ ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 3. | ಡಾ. ಕೆ ರಾಜೀವಲೋಚನ<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ-577501. | ಸದಸ್ಯರು |
| 4. | ಶ್ರೀ ಕೆ.ಆರ್. ದೇವರಾಜ್<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 129 | ಸದಸ್ಯರು |
| 5. | ಡಾ. ಪ್ರಸನ್ನ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ) ತುಮಕೂರು ಜಿಲ್ಲೆ. | ಸದಸ್ಯರು |
| 6. | ಶ್ರೀ ಕುಮಾರಸ್ವಾಮಿ ಹೆಚ್.ಬಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ-572201. | ಸದಸ್ಯರು |
| 7. | ಪ್ರೊ. ರೇವಣಸಿದ್ದೇಶ್ವರ ಡಿ.ಆರ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ | ಸದಸ್ಯರು |
| 8. | ಡಾ. ಮಾಲತಿ ವಿ<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ-572202. | ಸದಸ್ಯರು |
| 9. | ಡಾ. ಕೊಟ್ರೇಶ್ ಎಂ.<br>ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 10. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 11. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ:23.01.2024 ಮಂಗಳವಾರ ಮಧ್ಯಾಹ್ನ: 3:15 ಕ್ಕೆ ONLINE ಮುಖಾಂತರ ನಡೆದ 2023-24ನೇ ಸಾಲಿನ ಮೂರನೇ ವಿಶೇಷ ಸಿಂಡಿಕೇಟ್ ONLINE ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಮಾನ್ಯ ಕುಲಪತಿಯವರು ಸಭೆಯ ಎಲ್ಲಾ ಸದಸ್ಯರುಗಳ ಗಮನಕ್ಕೆ ತಂದು ಕೆಳಕಂಡಂತೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರಮ ಸಂಖ್ಯೆ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| 1. | – | ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಉದ್ಘಾಟನೆಯ ಸಂಬಂಧ | ತುಮಕೂರು ವಿಶ್ವವಿದ್ಯಾನಿಲಯ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಶೈಕ್ಷಣಿಕ ಭವನ-1 ಕಟ್ಟಡವನ್ನು ಉದ್ಘಾಟಿಸಲು ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಇವರು ದಿನಾಂಕ:29.01.2024ರ ಸೋಮವಾರ ಮಧ್ಯಾಹ್ನ: 2:00 ಗಂಟೆಗೆ ವಿಶ್ವವಿದ್ಯಾನಿಲಯಕ್ಕೆ ಆಗಮಿಸಿ, ಸದರಿ ಕಟ್ಟಡದ ಉದ್ಘಾಟನೆಯನ್ನು Virtual ಮೂಲಕ ಉದ್ಘಾಟಿಸುವುದಾಗಿ ಹಾಗೂ ಈ ಕುರಿತು ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಕ್ಕೆ ಮಾನ್ಯ ಸದಸ್ಯರುಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. ಸದರಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಮಾನ್ಯ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಆತ್ಮೀಯವಾಗಿ ಆಹ್ವಾನಿಸಿದರು. |
| | | **ಶೈಕ್ಷಣಿಕ ವಿಭಾಗ** | |
| 2 | 2023-24:ವಿಶೇಷ. ಸಿಂ-03:ಶೈವಿ-1 | ಸ್ನಾತಕೋತ್ತರ ಎಂ.ಬಿ.ಎ. ವಿಭಾಗದಲ್ಲಿ MBA (Finance) ಕೋರ್ಸ್ ಪ್ರಾರಂಭಿಸುವ ಕುರಿತು. | ಸ್ನಾತಕೋತ್ತರ ಎಂ.ಬಿ.ಎ. ವಿಭಾಗದಲ್ಲಿ MBA (Finance) ಕೋರ್ಸ್‌ನ್ನು ಪ್ರಾರಂಭಿಸುವ ಸಂಬಂಧ ದಿನಾಂಕ:17.01.2024 ರಂದು ಎಂ.ಬಿ.ಎ. ವಿಭಾಗದ ಮುಖ್ಯಸ್ಥರು ಸಲ್ಲಿಸಿರುವ ಮನವಿಯನ್ವಯ ದಿನಾಂಕ: 18.01.2024ರಂದು ಅಧ್ಯಯನ ಮಂಡಳಿಯು ಸಭೆ ನಡೆಸಿ ಸಲ್ಲಿಸಿರುವ ಸಭಾ ನಡಾವಳಿಯನ್ನು ಹಾಗೂ ಸದರಿ ಸಭಾ ನಡಾವಳಿಯಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ MBA (Finance) ಕೋರ್ಸ್‌ನ್ನು ಪ್ರಾರಂಭದಲ್ಲಿ 60 (ಅರವತ್ತು) ಪ್ರವೇಶಮಿತಿಯೊಂದಿಗೆ ಹಾಗೂ ರೂ. 1.25 ಲಕ್ಷ ವಾರ್ಷಿಕ ಪ್ರವೇಶ ಶುಲ್ಕದೊಂದಿಗೆ |

| | | | |
|---|---|---|---|
| | | | ಪ್ರಾರಂಭಿಸಲು, ತದನಂತರದಲ್ಲಿ ಸದರಿ ಕೋರ್ಸಿಗೆ ಬೇಡಿಕೆ ಉಂಟಾದಲ್ಲಿ ಪ್ರವೇಶಮಿತಿಯನ್ನು 60 ರಿಂದ 120 ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.<br>ಸದರಿ MBA (Finance) ಕೋರ್ಸನ್ನು ಪ್ರಾರಂಭಿಸುವ ಕುರಿತು, ಕೂಲಂಕುಷವಾಗಿ ಚರ್ಚಿಸಿದ ಸಭೆಯು ಸ್ನಾತಕೋತ್ತರ ಎಂ.ಬಿ.ಎ. ವಿಭಾಗದಲ್ಲಿ MBA (Finance) ಹೊಸ ಕೋರ್ಸ್‌ನ್ನು 2023–24ನೇ ಶೈಕ್ಷಣಿಕ ಸಾಲಿನಿಂದ ಸೆಲ್ಫ್ ಫೈನಾನ್ಸ್ ಅಡಿಯಲ್ಲಿ ಪ್ರಾರಂಭಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಅನುಮತಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು